ಎಜ್ಯುಕೇಶನಲ್ ಡಿಪಾರ್ಟ್‌ಮೆಂಟಿನ ಅಮಲದಾರರಿಗೆ ಸೂಚನೆಗಳು.

ಎಜ್ಯುಕೇಶನಲ್ ಡಿಪಾರ್ಟ್‌ಮೆಂಟಿನವರು ಮಾಡತಕ್ಕ ಸಹಾಯದ ಪರಿಮಾಣವು, ಈ ಖಾತೆಯ ಈಗಿನ ಸಿಬಂದಿಯ ಮೂಲಕ ಅವಶ್ಯವಾಗಿ ಮರ್ಯಾದಿತವಾಗುವದೆಂಬದನ್ನು ಈ ಕೆಳಗೆ ಹೇಳಿದ ಸೂಚನೆಗಳ ಸಂಬಂಧದಲ್ಲಿ ನೆನಪಿನಲ್ಲಿಡತಕ್ಕದ್ದು. ತಪಾಸಣೆಯ ಅಮಲದಾರರ ಸಂಖ್ಯೆಯು ಸಣ್ಣದಿರುತ್ತದೆ ಮತ್ತು ಈ ಕಾರಣದಿಂದ ಇಂಥ ಅಮಲದಾರರಿಗೆ ಬಹಳೇ ಕೆಲಸವು ಬೀಳುತ್ತದೆ. ಕೆಲವು ಸರಿದ ಸಹಾಯವನ್ನು ಅವರು ಕೊಟ್ಟೇ ಕೊಡುವರು; ಆದರೆ ವಾಡಿಕೆಯಾಗಿ ಮುಖ್ಯ ಕೆಲಸವು ಗ್ರಾಮದ ಶಿಕ್ಷಕನ ಮೇಲೆಯೇ ಅವಶ್ಯವಾಗಿ ಬೀಳುವದು. ಈ ಜವಾಬದಾರಿಯ ದೃಷ್ಟಿಯಿಂದ, ಗ್ರಾಮದ ಶಿಕ್ಷಕನಿಗೆ ಯಾವತ್ತು ಶಕ್ಯವಿರುವ ಉತ್ತೇಜನವನ್ನು ಕೊಡುವ ಮತ್ತು ಎಲ್ಲ ಪ್ರಸಂಗಗಳಲ್ಲಿ ಅವನನ್ನು ಎಲ್ಲಕ್ಕೂ ಹೆಚ್ಚು ಸಹಾನುಭೂತಿಯಿಂದ ಮತ್ತು ಮರ್ಯಾದೆಯಿಂದ ನಡಿಸಿಕೊಳ್ಳುವ ಜವಾಬದಾರಿಯನ್ನು ಎಲ್ಲ ಕಡೆಯ ಎಜ್ಯುಕೇಶನಲ್ ಡಿಪಾರ್ಟ್‌ಮೆಂಟಿನ ಅಮಲದಾರರು ತಿಳಿದಿರಬೇಕು. ಗ್ರಾಮಗಳಲ್ಲಿಯ ಕೆಲಸದ ಯಶಸ್ಸಿನ ಬಹು ಭಾಗವು ಶಿಕ್ಷಕನ ದರ್ಜೆಯನ್ನು ಹಾಗೂ ಗೌರವವನ್ನು ಕಾಯುವದರ ಮೇಲೆ ಅವಲಂಬಿಸಿರುವದರಿಂದ, ಈ ಖಾತೆಯ ಅಮಲದಾರರು ಈ ಉದ್ದೇಶದ ಬಗ್ಗೆ ಮಾಡಬಹುದಾದಂಥ ಪ್ರತಿಯೊಂದು ಕೆಲಸವು ತಮ್ಮ ಕರ್ತವ್ಯಗಳ ಮುಖ್ಯ ಭಾಗವೆಂದು ತಿಳಿಯಬೇಕು. ಇದರ ಹೊರ್ತಾಗಿ, ಗ್ರಾಮಸುಧಾರಣೆಯ ಕೆಲಸವನ್ನು ಮುಂದುವರಿಸುವ ಬಗ್ಗೆ ಸ್ಥಾಪಿಸಲ್ಪಡತಕ್ಕ ಕಮಿಟಿಗಳ ಮತ್ತು ಪೋಟ-ಕಮಿಟಿಗಳ ಸಂಗಡ ಸಂಪೂರ್ಣವಾಗಿ ಸಹಕಾರ ಮಾಡುವದು ಇಂಥ ಅಮಲದಾರರ ಕರ್ತವ್ಯವೆಂಬದನ್ನು ಅವರಿಗೆ ಪುನಃ ಹೇಳುವದು ಅನವಶ್ಯಕವು.

೨. ಗ್ರಾಮದ ಶಾಲೆಗಳಿಗೆ ಭೆಟ್ಟಿ ಕೊಟ್ಟಾಗ್ಗೆ,—

(ಅ) ಶಾಲೆಯ ಇಮಾರತಿಗೆ,

(ಬ) ಶಾಲೆಗೆ ಬರುವ ಹುಡುಗರಿಗೆ,

(ಕ) ಗ್ರಾಮದಲ್ಲಿ ಪ್ರಜಾರಕಾರ್ಯವನ್ನು ಕೈಕೊಳ್ಳಲಿಕ್ಕೆ ಶಕ್ಯವಿರುವ ಪದ್ಧತಿಗಳಿಗೆ,

ಸಂಬಂಧಿಸಿದ ಕೆಲವು ಸಂಗತಿಗಳ ಕಡೆಗೆ ಅವರು ವಿಶೇಷವಾಗಿ ಲಕ್ಷ್ಯಗೊಟ್ಟರೆ, ಇಂಥ ಮುಖಡಳಗಳಿಗೆ ಬಹಳ ಸಹಾಯವಾಗುವಂತಿದೆ—

(ಅ) ಇಮಾರತುಗಳು ಶಾಲೆಯ ಕಾರಣಗಳ ಬಗ್ಗೆ ಯೋಗ್ಯವಿರುವವೆಂಬದನ್ನು, ಅಂದರೆ, ಅವುಗಳಲ್ಲಿ ವಿದ್ಯಾರ್ಥಿಗಳಿಗೆ ಕೂಡುವದಕ್ಕಾಗಿ ಸಾಕಷ್ಟು ಸ್ಥಳವಿರುತ್ತದೆ, ಅವುಗಳಲ್ಲಿ ಚನ್ನಾಗಿ ಬೆಳಕು ಬರುತ್ತದೆ ಮತ್ತು ಯಥೇಷ್ಟ ಗಾಳಿಯಿರುತ್ತದೆ ಎಂಬದನ್ನು, ಇನ್‌ಸ್ಪೆಕ್ಟರರು ನೋಡಬೇಕು. ಶಾಲೆಯ ಉಪಕರಣಗಳ ಮತ್ತು ಇಮಾರತಿನ ದುರುಸ್ತಿಯ ಸಾಮಾನ್ಯ ಸ್ಥಿತಿಯ ಕಡೆಗೆ ಸಹ ಲಕ್ಷ್ಯಗೊಡಬೇಕು. ಇದಲ್ಲದೆ, ಯೋಚಿಸಿದ ಗ್ರಾಮಸುಧಾರಣೆಯ ಕೆಲಸದ ಬಹು ಭಾಗವು

ಸ್ವಚ್ಛತೆ ಮತ್ತು ಆರೋಗ್ಯ ಇವುಗಳಿಗೆ ಸಂಬಂಧಿಸುವದರಿಂದ, ಆ ಶಾಲೆಯು ಮತ್ತು ಅದರ ಸುತ್ತಲಿನ ಸ್ಥಳವು ಪೂರ್ಣ ಸ್ವಚ್ಛವಾಗಿಯೂ ಹೆಚ್ಚು ಆರೋಗ್ಯಕರ ಸ್ಥಿತಿಯಲ್ಲಿಯೂ ಇಡಲ್ಪಟ್ಟಿದೆಯೆಂಬದನ್ನು ಅವರು ನೋಡಬೇಕು. ಶಾಲೆಗೆ ಒಂದು ತೋಟವಿದ್ದರೆ, ಅದರಲ್ಲಿ ಹುಡುಗರು ಕೆಲಸ ಮಾಡುವ ಚಟವುಳ್ಳವರಾಗಿರುತ್ತಾರೋ ಇಲ್ಲವೋ ಎಂಬದನ್ನು ಅವರು ತಿಳುಕೊಳ್ಳಬೇಕು, ಮತ್ತು ಈ ಮೊದಲೇ ಇಂಥ ಕೆಲಸವು ಪ್ರಾರಂಭಿಸಲ್ಪಟ್ಟಿರದಿದ್ದಲ್ಲಿ ಅದನ್ನು ಪ್ರಾರಂಭಿಸುವದಕ್ಕೆ ಅವರು ಉತ್ತೇಜನ ಕೊಡಬೇಕು. ಶಾಲೆಗೆ ತೋಟವಿರದಿದ್ದರೆ, ತೋಟವನ್ನು ಪ್ರಾರಂಭ ಮಾಡುವದರಲ್ಲಿ ಇನ್‌ಸ್ಪೆಕ್ಟರರು ಮಹತ್ವದ ಸಹಾಯವನ್ನು ಮಾಡಬಹುದು. ಅದರಂತೆಯೇ, ಶಾಲೆಗೆ ಒಂದು ಆಡುವ ಸ್ಥಳವಿದೆ ಮತ್ತು ಅದನ್ನು ವಿದ್ಯಾರ್ಥಿಗಳು ನಿಯಮಿತವಾಗಿ ಉಪಯೋಗಿಸುತ್ತಾರೆ ಎಂಬದನ್ನು ನೋಡುವದು ಅವರ ಕರ್ತವ್ಯದ ಭಾಗವಾಗಿರಬೇಕು. ಶಾಲೆಗೆ ಆಟವಾಡುವ ಸ್ಥಳವಿರದಿದ್ದರೆ, ಶಕ್ಯವಿದ್ದಷ್ಟು ಕಡಿಮೆ ಖರ್ಚಿನಲ್ಲಿ ಒಂದು ಸ್ಥಳವನ್ನು ದೊರಕಿಸುವದಕ್ಕೆ ಯೋಜನೆಗಳನ್ನು ಕೈಕೊಳ್ಳಬೇಕು. ಕೊನೆಯ ಮಾತೆಂದರೆ, ತಪಾಸಣೆಯ ಅಮಲದಾರರು ಹೊಸ ಅಥವಾ ಹೆಚ್ಚಿನ ಶಾಲೆಯ ಇಮಾರತುಗಳು ಬೇಕಾಗಿದ್ದ ಯಾವತ್ತು ಸಂಗತಿಗಳನ್ನು ರಿಪೋರ್ಟ್ ಮಾಡಬೇಕು ಮತ್ತು ಹೀಗೆ ಯೋಚಿಸಿದ ಯಾವವಾದರೂ ಇಮಾರತುಗಳಲ್ಲಿ ಆಗಬೇಕಾದ ಬದಲಾವಣೆಗಳ ಬಗ್ಗೆಯೂ ಯೋಚಿಸಿದ ಸ್ಥಳದ ಬಗ್ಗೆಯೂ ಅವರು ವಿಶೇಷ ಲಕ್ಷ್ಯವನ್ನು ಪೂರೈಸಬೇಕು.

(ಬ) ಈ ಸದರಿನ ಕೆಳಗೆ ತಪಾಸಣೆಯ ಅಮಲದಾರರ ಕರ್ತವ್ಯಗಳು, (ಅ) ಸದರಿನ ಕೆಳಗಿನಂತೆಯೇ, ಅವರ ಕೆಲಸದ ಸಾಮಾನ್ಯ ದಿನಚರ್ಯೆಯಲ್ಲಿ ಸೇರುತ್ತವೆ. ಆದರೆ ಗ್ರಾಮಸುಧಾರಣೆಯ ಚಳವಳಿಯ ಸಂಗಡ ಸಹಕಾರ ಮಾಡಬೇಕಾದರೆ, ಮೊದಲು, ಈ ಕರ್ತವ್ಯಗಳನ್ನು ತಪ್ಪದೆ ಮಾಡಬೇಕು ಮತ್ತು ತರುವಾಯ, ಈ ಮಾರ್ಗದಿಂದ ಸಹಾಯ ಮಾಡಿ ಈ ರೀತಿಯಿಂದ ಅಮಲದಾರನ ವ್ಯಾವಹಾರಿಕ ಜವಾಬದಾರಿಯ ಕೆಲವು ಅಂಶವನ್ನು ಹೊರಬಹುದಾಗಿದ್ದ ಮತ್ತು ಗ್ರಾಮದ ಬಗ್ಗೆ ಈ ಮೊದಲೇ ಕೆಲಸ ಮಾಡುತ್ತಿರುವ ಇತರ ಯಾವವಾದರೂ ಮಂಡಳಗಳ ಸಂಗಡ ವ್ಯವಹಾರವನ್ನಿಡಬೇಕು. ಈ ಕರ್ತವ್ಯಗಳ ಪೈಕಿ ತೀರ ಸ್ಪಷ್ಟವಾದ ಕರ್ತವ್ಯವೆಂದರೆ, ಶಾಲೆಗೆ ಹೋಗುವ ವಯಸ್ಸಿನ ಹುಡುಗರೂ ಹುಡಿಗೆಯರೂ ನಿಜವಾಗಿ ಮತ್ತು ನಿಯಮಿತತನದಿಂದ ಶಾಲೆಗೆ ಹೋಗುತ್ತಾರೋ ಇಲ್ಲವೋ, ಮತ್ತು ಅವರ ಪೈಕಿ ಬಹುಸಂಖ್ಯಾಕರು ಅಭ್ಯಾಸಕ್ರಮವು ಮುಗಿಯುವವರೆಗೆ ಶಾಲೆಯಲ್ಲಿ ಉಳಿಯುತ್ತಾರೋ ಅಥವಾ ಉಳಿಯುವ ಉದ್ದೇಶವಿದೆಯೋ ಇಲ್ಲವೋ ಎಂಬದನ್ನು ನೋಡುವದು. ಇದಲ್ಲದೆ, ಹುಡುಗರು ಸಾಮಾನ್ಯವಾಗಿ ಆರೋಗ್ಯಕರವಾಗಿ ಕಾಣಿಸುತ್ತಾರೋ ಹ್ಯಾಗೆಂಬದನ್ನೂ, ಅವರ ದೇಹದ ಮತ್ತು ಅರಿವೆಗಳ ಸ್ವಚ್ಛತೆಯನ್ನೂ ಕುರಿತು ರಿಪೋರ್ಟು ಮಾಡಿ ಇನ್‌ಸ್ಪೆಕ್ಟರರು, ಗ್ರಾಮದಲ್ಲಿ ಆರೋಗ್ಯದ ವಿಷಯ

ದಲ್ಲಿ ತಜ್ಞತೆಯನ್ನು ಪಡೆಯುತ್ತಿರುವ ಕೆಲಸಗಾರರಿಗೆ ಸಹಾಯ ಮಾಡ ಬಹುದು. ವರ್ಗಗಳು ನಡೆದಾಗ್ಗೆ ಹುಡುಗರು ಸರಿಯಾದ ಪದ್ಧತಿ ಯಿಂದ ಕುಳಿತಿರುವರೋ ಇಲ್ಲವೋ ಮತ್ತು ಅವರು ತಮ್ಮ ಕಣ್ಣಿನ ದೃಷ್ಟಿಗೆ ತೊಂದರೆಯಾಗದ ರೀತಿಯಿಂದ ತಮ್ಮ ಪುಸ್ತಕಗಳನ್ನು ಹಿಡಿಯುತ್ತಾರೋ ಇಲ್ಲವೋ ಎಂಬದನ್ನು ಅವರು ನೋಡಬೇಕು. ಅವರು, ಹಲ್ಲುಗಳ ಸ್ಥಿತಿಯ ಕಡೆಗೆ ಸಹ ಲಕ್ಷ್ಯಗೊಡಬೇಕು ಮತ್ತು ದೋಷವುಳ್ಳ ಕಣ್ಣುಗಳ ಅಥವಾ ಕಣ್ಣುಬೇನೆಗಳ ಯಾವತ್ತು ಚಿನ್ಹೆ ಗಳನ್ನು ಕಂಡುಹಿಡಿಯಬೇಕು. ಸಾಂಕ್ರಾಮಿಕ ಅಥವಾ ಸಾಂಸರ್ಗಿಕ ರೋಗವುಂಟಾದದ್ದು ಕಂಡುಬಂದಲ್ಲಿ, ಅದಕ್ಕೆ ಕೂಡಲೆ ಉಪಚಾರ ಮಾಡುವದರ ಸಲುವಾಗಿಯೂ, ಅದರ ಸುಂಕವು ಇತರ ಹುಡುಗರಿಗೆ ಹತ್ತುವ ಅಪಾಯವನ್ನು ತಪ್ಪಿಸುವದಕ್ಕಾಗಿ ಉಪಾಯಗಳು ಕೈಕೊಳ್ಳ ಲ್ಪಡುವ ಸಲುವಾಗಿಯೂ, ಆ ರೋಗದ ಸಂಗತಿಯನ್ನು ಹೆಡ್ ಮಾಸ್ತ ರನ ಮತ್ತು ಸ್ಕೂಲ ಕಮಿಟಿಯ ಲಕ್ಷ್ಯಕ್ಕೆ ತರಬೇಕು. ಶಾಲೆಯ ನೌಕರರು, ತಮ್ಮ ವಿದ್ಯಾರ್ಥಿಗಳ ಶಿಕ್ಷಣದ ಬಗ್ಗೆ ಜವಾಬದಾರರಾಗಿರು ವಂತೆಯೇ ಅವರ ಆರೋಗ್ಯದ ಹಾಗೂ ಶಾರೀರಿಕ ಸುರಕ್ಷಿತತೆಯ ಮೇಲೆ ಕಣ್ಣಿಡುವದೂ ಅವರ ಕೆಲಸವಾಗಿರುತ್ತದೆಯೆಂಬ ಸಂಗತಿ ಯನ್ನು ಅವರು ಮರೆಯದಂತೆ ಇನ್‌ಸ್ಪೆಕ್ಟರರು ಮಾಡಬೇಕು.

(ಕ) ತಪಾಸಣೆಯ ಅಮಲದಾರನು ಗ್ರಾಮದ ಶಾಲೆಗೆ ಭೆಟ್ಟಿ ಕೊಟ್ಟ ಸಂಧಿಯನ್ನು, ಅವನು ಕೆಲವು ಪ್ರಕಾರದ ಪ್ರಚಾರಕಾರ್ಯಗಳ ಬಗ್ಗೆ ಯಾವಾಗಲೂ ಉಪಯೋಗಿಸಬೇಕು. ಗ್ರಾಮಸುಧಾರಣೆಗೆ ಸಂಬಂಧಿ ಸುವ ಪ್ರತಿಯೊಂದು ವಿಷಯದಲ್ಲಿಯೂ ಅವನು ಕೆಲವು ಯೋಗ್ಯವಾದ ಮಾತುಗಳನ್ನು ಹೇಳಲಿಕ್ಕೂ, ಕೆಲಮಟ್ಟಿಗೆ ಉಪಯುಕ್ತವಾದ ಆಲೋ ಚನೆಯನ್ನು ಕೊಡಲಿಕ್ಕೂ ಯಾವಾಗಲೂ ಸಮರ್ಥನಾಗಿಯೇ ಇರು ತ್ತಾನೆ. ಗ್ರಾಮದ ಭಂಗೀ ಕೆಲಸ ಮತ್ತು ಸ್ವಚ್ಛತೆ, ಆರೋಗ್ಯದ ಸಾದಾ ನಿಯಮಗಳು, ಗ್ರಾಮದ ಪುಸ್ತಕಾಲಯಗಳನ್ನು ಮತ್ತು ವಾಚನಾಲಯಗಳನ್ನು ಪ್ರಾರಂಭಿಸುವ ಆವಶ್ಯಕತೆ, ನಾಲ್ಕನೇ ಇಯತ್ತೆ ಮುಗಿಯುವ ವರೆಗೆ ಹುಡುಗರನ್ನು ಶಾಲೆಯಲ್ಲಿಡುವ ಇಷ್ಟತೆ ಮತ್ತು ಒಂದು ಯೋಗ್ಯವಾದ ಶಾಲೆಯ ಮನೆಯ ವ್ಯವಸ್ಥೆ ಮಾಡುವದರಲ್ಲಿ ಸ್ಥಾನಿಕ ಅಧಿಕಾರೀ ಸಂಘಕ್ಕೆ ಪ್ರತಿಯೊಬ್ಬ ಗ್ರಾಮನಿವಾಸಿಯು ತನ್ನ ಕೈಲಾದ ಸಹಾಯ ಮಾಡುವ ಆವಶ್ಯಕತೆ ಇವೆಲ್ಲ ವಿಷಯಗಳನ್ನು, ಅವರು ಇಡೀ ಗ್ರಾಮದ ಜನರ ಸಂಗಡ ಖಾಸಗಿ ರೀತಿಯಿಂದ ಮಾತಾಡುವಾಗ್ಗೆ ಅಥವಾ ಅವರಿಗೆ ವ್ಯಾಖ್ಯಾನ ಕೊಡುವಾಗ್ಗೆ ಚರ್ಚಿಸ ಬಹುದು. ಅಮಲದಾರರು, ಶಕ್ಯವಿದ್ದಾಗ್ಗೆಲ್ಲ, ಆರಿಸಿದ ಗ್ರಾಮಗಳಲ್ಲಿ ಶೈಕ್ಷಣಿಕ ಸ್ವರೂಪದ ವಿಷಯಗಳ ಮೇಲೆ ಮ್ಯಾಜಿಕ್ ಲ್ಯಾಂಟರ್ನದ ಸಹಾಯದಿಂದ ವ್ಯಾಖ್ಯಾನಗಳನ್ನು ಕೊಡುವ ವ್ಯವಸ್ಥೆಯನ್ನು ಸಹ ಮಾಡಬೇಕು.

ಅವರು ಮಾಡಬಹುದಾದಂಥ ಮತ್ತೊಂದು ಸಂಗತಿಯೇನಂದರೆ, ಗೆಳೆತನದ ರೀತಿಯಿಂದ ಚಿಕ್ಕ ಸಂಭಾಷಣಗಳನ್ನು ನಡಿಸಿ, ಶಾಲೆಗಳಲ್ಲಿ ನಿಕೃಷ್ಟ ವರ್ಗದ ಹುಡು

ಗರ ಪ್ರವೇಶದ ಬಗ್ಗೆ ಇರುವ ತಪ್ಪು ಕಲ್ಪನೆಗಳನ್ನು ತೆಗೆದುಹಾಕುವದು ಮತ್ತು ಸದರಿ ಹುಡುಗರಿಗೆ ಅನಾನುಕೂಲತೆಗಳುಂಟಾಗದಂತೆ ನೋಡಿಕೊಳ್ಳುವದು. ಕೊನೆಯ ಮಾತೆಂದರೆ, ಪ್ರತಿಯೊಬ್ಬ ತಪಾಸಣೆಯ ಅಮಲದಾರನು, ಬಾಯ್-ಸ್ಕೌಟ, ಗರ್ಲ-ಗಾಯಿಡ್ ಮತ್ತು ಜ್ಯುನಿಯರ ರೆಡ್-ಕ್ರಾಸ ಇವುಗಳಂಥ ಸಣ್ಣ ಹುಡುಗರಿಗೆ ಸಂಬಂಧಿಸಿದ ಚಳವಳಿಗಳಿಗೆ ಉತ್ತೇಜನ ಕೊಡುವದರ ಬಗ್ಗೆ ಬಹಳ ಕೆಲಸ ಮಾಡ ಬಹುದು.

ಈ ಮೊದಲೇ ಹೇಳಿದ ಈ ಯಾವತ್ತು ಸಂಗತಿಗಳು ಪ್ರತಿಯೊಬ್ಬ ಅಮಲ ದಾರನ ವಾಡಿಕೆಯ ಕರ್ತವ್ಯಗಳ ಭಾಗವಾಗಿರುತ್ತವೆ. ಅವಶ್ಯವಾದದ್ದೇನಂದರೆ, ಅವುಗಳನ್ನು ಮಾಡುವದರಲ್ಲಿ ಈಗ್ಗೆ ಅವನು ವಿಶೇಷ ತತ್ಪರನಾಗಬೇಕಾಗಿದೆ ಮತ್ತು ಅವುಗಳು ತನ್ನ ಖಾತೆಯ ತಜ್ಞರಿಗೆ ಸಂಬಂಧಿಸಿದ ಕರ್ತವ್ಯಗಳೆಂದು ಮಾತ್ರ ಇನ್ನು ಮುಂದೆ ತಿಳಿಯದೆ, ತಾನು ಅವುಗಳ ಬಗ್ಗೆ ತಾಯಿತಂದೆಗಳ, ವಿದ್ಯಾರ್ಥಿಗಳ, ಶಿಕ್ಷಕರ ಮತ್ತು ಸಾಮಾನ್ಯ ಜನರ ಸಂಗಡ ಸಹಕಾರ ಮಾಡಬೇಕೆಂದು ತಿಳಿಯ ಬೇಕು. ಅಂದರೆ, ಶಿಕ್ಷಣದ ತಪಾಸಣೆಯ ಅಮಲದಾರನ ನ್ಯಾಯ್ಯವಾದ ಕರ್ತವ್ಯ ಗಳು ಗ್ರಾಮಸುಧಾರಣೆಯ ಸಾಮಾನ್ಯ ಯೋಜನೆಯಲ್ಲಿ ಸರಿಗೂಡುವಂತೆ ಮಾಡ ಬಹುದು.